'ನೀತಿ ಸರಿಯಿಲ್ಲದವರು ಜಾತಿಯ ಬಗ್ಗೆ ಮಾತನಾಡುವುದು ಸರಿಯೆ? ನೀನು ಕುಡಿದು, ತಿಂದು ಬರೋದು ನನಗೆ ಗೊತ್ತಿಲ್ಲ ಅಂದ್ಕೊಂಡೆಯ ಅಣ್ಣ? ಅಪ್ರಾಮಾಣಿಕತೆ, ಅವ್ಯವಹಾರಗಳ ಕೊಳಚೆ ಜೀವನ ನಡೆಸುವವರು, ಕೊಳಚೆಗೇರಿಗಳಲ್ಲಿ ಶುದ್ಧ ಜೀವನ ನಡೆಸುತ್ತ ತಿನ್ನದೆ ಕುಡಿಯದೆ ಬಾಳುವವರ ಜಾತಿ ಬಗ್ಗೆ ಪ್ರಶ್ನೆ ಎತ್ತುವುದನ್ನು ನಾನು ಖಂಡಿಸುತ್ತೇನೆ' – ಗುಡುಗಿದ್ದಳು.

ಇದು ಮಾತಿನಲ್ಲಿ ಬಗೆಹರಿಯುವುದಿಲ್ಲ ಎಂದು ತಿಳಿದಾಗಲೆ ವರನ ಬೇಟೆ ಆರಂಭಿಸಿದ್ದು. 'ಏನೋ ಇಲ್ಲಿ ಕೂತುಬಿಟ್ಟೆ'– ಅಣ್ಣನ ಧ್ವನಿ ಕೇಳಿ ಬೆಚ್ಚಿಬೀಳುತ್ತೇನೆ. ಪಿಳಿಪಿಳಿ ಅವನನ್ನೇ ನೋಡುತ್ತೇನೆ. 'ಸ್ವಲ್ಪ ಹೊತ್ತು ಮಲಗಬಾರದೇನೋ. ನಾನು ಕೂತಿರ್ತೀನಿ. ಅದ್ಯಾವನು ಬರ್ತಾನೋ ಬರ್ಲಿ ಗಂಡು; ನನ್ನ ಸಾಯಿಸಿಯೇ ಒಳ ಹೋಗ್ಬೇಕು ಅವನು' – ಅಣ್ಣ ಭಾವೋದ್ವೇಗದಿಂದ ಹೇಳುತ್ತಾನೆ. ಅವನಿಗೆ ಒಂದಿಷ್ಟು ವಿಷಯ ಗೊತ್ತಾಗಿದೆ. ಮದುವೆ ಮನೆಯ ಜವಾಬ್ದಾರಿ ಪೂರಾ ಅವನದ್ದೇ. ನನ್ನದು ಏನಿದ್ದರೂ ಹೊರ– ಒಳಗಿನ ಬೇಹುಗಾರಿಕೆ. ಸ್ವಂತ ಹಳ್ಳಿ, ಸ್ವಂತಮನೆ ಕಂಡುಂಡ ಜನ ಅನ್ನೋ ಧೈರ್ಯ.

'ಗಂಡಿನವರು ಬಲು ಸಂಪ್ರದಾಯಸ್ಥರಪ್ಪ, ಮಂತ್ರ ಹೇಳೋದರಲ್ಲೂ ತಪ್ಪು ಕಂಡುಹಿಡಿಯೋವಷ್ಟು ಪ್ರಾಜ್ಞ ನಿನ್ನ ಎರಡನೆ ಅಳಿಯ' ಅಣ್ಣ ಬೀಗುತ್ತ ಹೇಳುವಾಗ ನೀರಸನಾಗಿ ನಗುತ್ತೇನೆ. 'ಚಿಂತೆ ಮಾಡಬೇಡವೋ, ಪರಮಾತ್ಮ ಒಬ್ಬನಿದಾನೆ. ಏನಾಗಬೇಕೋ ಅದೇ ಆಗುತ್ತೆ... ಹೋಗು, 'ನಾಂದಿಹೋಮ'ಕ್ಕೆ ಸಿದ್ಧ ಮಾಡ್ತಾ ಇದಾರೆ. ಮುಗಿಸಿಕೊಂಡು ಬಾ, ನಾನು ಇಲ್ಲೇ ಇರ್ತೀನಿ' ಕೈ ಆಡಿಸುತ್ತಾನೆ ಅಣ್ಣ– ನಾಟಕದಲ್ಲಿನ ಪಾತ್ರಧಾರಿಯಂತೆ ವಾಚ್ ನೋಡುತ್ತೇನೆ. ನಾಲ್ಕು ಗಂಟೆ ಸಮಯ. ಬೇಗ ಬೆಳಗಾಗಿ, ಬೇಗ ಏಳೂವರೆಯಾಗಿ ಬಿಟ್ಟರೆ ಆಮೇಲೆ ಸಾವೇ ಬರಲಿ ಸಂತೋಷವಾಗಿ ಸ್ವೀಕರಿಸುತ್ತೇನೆ. ಮಾನ ಹೋದ ಮೇಲಿನ ಬದುಕೂ ಒಂದು ಬದುಕೇ? ನಿಟ್ಟುಸಿರುಗಳು ಮೇಲಿಂದ ಮೇಲೆ ಬರುತ್ತವೆ. ಆಕಳಿಕೆ ರಾಗವಾಗಿ ಬಂದು ಕಣ್ಣು ಮಂಜಾಗುತ್ತದೆ. ಆತುರದಲ್ಲಿ ಸ್ನಾನ ಮುಗಿಸಿ ಮಡಿ ಉಟ್ಟು ಬರುತ್ತೇನೆ.

ಶಾಮಾಶಾಸ್ತ್ರಿಗಳು ಮಂತ್ರ ಗುನುಗುತ್ತಲೇ ನಗುತ್ತ ಸ್ವಾಗತಿಸುತ್ತಾರೆ. ಹೋಗಿ ಕೂರುತ್ತೇನೆ. ಯಾಂತ್ರಿಕವಾಗಿ 'ನಾಂದಿಹೋಮ'ದಲ್ಲಿ ತೊಡಗುತ್ತೇನೆ. ಅಳಿಯಂದಿರುಗಳು ಬಳಲಿದವರಂತೆ ಕಾಣುತ್ತಾರೆ. 'ಏನು ಅಳಿಯಂದಿರೆ ತುಂಬಾ ನಿದ್ರೆ ಬರ್ತಾ ಇರ್ಬೇಕು?' ಅಳಿಯರುಗಳನ್ನು ಪ್ರೀತಿಯಿಂದ ಮಾತನಾಡಿಸುತ್ತೇನೆ. ಎದುರಿನಲ್ಲಿ ನಮ್ಮ ಚೆಂದವಾದ ಹುಡುಗೀರು ಸುಳಿದಾಡೋವಾಗ ಅವರಿಗೆಲ್ಲಿ ನಿದ್ದೆನೋ ಕಿಟ್ಟಿ. ಒಂದು ತಿಂಗಳು ಕೂರಿಸಿದ್ರೂ ಹಿಂಗೇ ಕೂತ್ಕೋತವೆ' ರುಕ್ಕಜ್ಜಿ ಬೊಚ್ಚು ಬಾಯಿ ಅಗಲಿಸಿ ಪಕ್ಕನೆ ನಗುತ್ತಾಳೆ. ಎಲ್ಲರೂ ನಗುತ್ತಾರೆ. ಶೀಲ ಕೂಡ ನಗುತ್ತಾಳೆ. ಅವಳು ನನ್ನನ್ನು ಗೇಲಿ ಮಾಡಿ ನಕ್ಕಂತೆಯೇ ಭಾಸವಾಗುತ್ತದೆ. ಅವಳ ನಗೆಯಲ್ಲಿ ವಂಚನೆಯ ಸುಳಿವು ಸ್ಪಷ್ಟವಾಗಿ ಕಾಣುತ್ತದೆ. ಶಾಸ್ತ್ರ ಮುಗಿದ ಮೇಲೆ ಪಡಸಾಲೆ ತುಂಬಾ ಶತಪಥ ಹಾಕುತ್ತ ಮಲಗಿದವರ ಹೊದಿಕೆ ಸರಿಮಾಡುತ್ತ, ದಾರಿಯಲ್ಲಿ ಮಲಗಿರುವ ಮಕ್ಕಳನ್ನು ಬದಿಗೆ ಎಳೆದು ಮಲಗಿಸುತ್ತ ಸಮಯವನ್ನು ಕೊಲ್ಲುತ್ತೇನೆ.

ಇನ್ನೂರು ಮೈಲಿಗಳಷ್ಟು ದೂರದಿಂದ, ಸರಿಯಾದ ವಾಹನ ಸೌಕರ್ಯವಿಲ್ಲದ ಈ ಹಳ್ಳಿಗೆ ಅವನು ಬಂದಾನೆಯೆ? ಬಂದರೂ ಅವನನ್ನಿಲ್ಲಿ ಯಾರು ಕೇಳಬೇಕು? ಬರೀ ನೀರು ಹೊರುವ ಹುಡುಗರಿಂದಲೇ ಚಚ್ಚಿಸಿ ಕಳಿಸಬಹುದು. ಬರುವವನಾದರೆ ಇಷ್ಟು ತಡಮಾಡಿಯಾನೆ? ಈ ಹುಡುಗರ ಪ್ರೇಮವಾದರೂ ಎಷ್ಟು ಗಟ್ಟಿ? ದೇಹದ ಮೇಲಿನ ಆಕರ್ಷಣೆಗಾಗಿ ಹಿಂದೆ ಬೀಳುತ್ತವೆ. ಸುಖ ಸಿಕ್ಕಮೇಲೂ ಹಿಂದೆ ಬೀಳುವ ಚಪಲ, ಹೋರಾಡುವ ನೈತಿಕ ಸ್ಥೈರ್ಯ